## ಫೋಟೊ ಪ್ರಬಂಧ

ಮೊದಲೇ ಈ ಜಾಡಿನ ಸುಳಿವರಿತ ಅನೇಕ ಜೀಪುಗಳ ಕ್ಯಾಮೆರಾಮಂದಿ ಬಂದು ಅಲ್ಲಿ ಹೊಂಚು ಹಾಕಿ ಕಾಯುತ್ತಿದ್ದರು.

ಸಾಧಾರಣವಾಗಿ ಹುಲಿಗಳು ಕಾಡಿನಲ್ಲಿ ಸಂಚರಿಸುವ ಸೂಚನೆಯನ್ನು ಲಂಗೂರ್ ಎಂಬ ಮಂಗನ ಜಾತಿಯ ಕಪ್ಪು ಪ್ರಾಣಿ ಮೊದಲು ಕೊಡುತ್ತದೆ. ಕೆಲವೊಮ್ಮೆ ಜಿಂಕೆ, ಸಾರಂಗಗಳೂ ಗಾಬರಿಯಲ್ಲಿ ಕೂಗಿ ವಿಷಯ ತಿಳಿಸುತ್ತವೆ. ದಟ್ಟವಾದ ಕಾಡಿನಲ್ಲಿ ಇವು ಕೊಡುವ ಭಯದ ಈ ಶಬ್ದದ ಸುಳಿವೇ ಅತಿ ಮಹತ್ವದ್ದು. ಈ ಎಚ್ಚರಿಕೆಯ ಕರಗಂಟೆಗೆ ಫೋಟೋಗ್ರಾಫರ್‌ಗಳು 'ಕಾಲ್' ಎನ್ನುತ್ತಾರೆ. ಆದರೆ ಬಹಳಷ್ಟು ಸಲ ಈ ಅಲಾರಾಂ ಕಾಲ್ ಖಚಿತವೂ, ನಂಬಲರ್ಹವೂ ಆಗಿರುವುದಿಲ್ಲ.

ಕೆಲವು ಪಕ್ಷಿಗಳೂ ಸಹ ಹುಲಿಯ ಆಗಮನದ ಸಂದೇಶವನ್ನು ತಮ್ಮ ಭಯದ ದನಿಯಲ್ಲಿ ವ್ಯಕ್ತಪಡಿಸುತ್ತವೆ. ಇದನ್ನೆಲ್ಲಾ ಅರ್ಥಮಾಡಿಕೊಳ್ಳಲು ಒಂದಿಷ್ಟು ಕೌಶಲ್ಯವೂ ಅನುಭವವೂ ಬೇಕಾಗುತ್ತದೆ. ಪರಿಸರದ ಪಂಡಿತರು (ನ್ಯಾಚುರಲಿಸ್ಟ್) ಇದನ್ನೆಲ್ಲಾ ಚೆನ್ನಾಗಿ ಅರಿತು ವಿವರಿಸುತ್ತಾರೆ. ಜಿಮ್ ಕಾರ್ಬೆಟ್ ಕಾಡಿನಲ್ಲಿ ಇಂತಹ ನುರಿತ ತಜ್ಞರು ಪ್ರತಿ ಜೀಪಿಗೊಬ್ಬರು ಕಡ್ಡಾಯವಾಗಿ ಇದ್ದೇ ಇರುತ್ತಾರೆ. ಇವರ ಮಾರ್ಗದರ್ಶನದಲ್ಲೇ ಫೋಟೋಗ್ರಫಿ ಸವಾರಿ ಜರುಗುವುದು. ದಿನಾ ಕಾಡನ್ನು ಬಿಡದೆ ಸುತ್ತುವ ಅವರು ಹುಲಿಗಳ ಹೆಜ್ಜೆಗುರುತುಗಳ ಮೂಲಕ ಅವುಗಳ ಚಲನವಲನಗಳನ್ನು, ಓಡಾಡುವ ಹಾದಿಗಳನ್ನು ಗ್ರಹಿಸುತ್ತಾರೆ. ಊಹೆ ಮತ್ತು ದಟ್ಟ ಅನುಭವದ ತರ್ಕದಿಂದ ಇದೆಲ್ಲ ಒಂದು ಅಂದಾಜಿನಲ್ಲಿ ನಡೆಯುತ್ತದೆ. ಈ ಪರಿಯನ್ನು 'ಅಗೋಚರ ಜ್ಞಾನ ಮಾರ್ಗ' ಎಂದೂ ಕರೆಯಬಹುದು. ಕಾಡಿನ ಭಾಷೆ ತಿಳಿಯುವುದು ಒಂದು ವಿದ್ಯೆಯೇ ಹೌದು.

ಗಂಟೆಗಟ್ಟಲೆ ಕಾಯುವಾಗ ಸನಿಹದಲ್ಲೇ ಚರಪರ ಎಂದು ಸದ್ದಾಯಿತು. ನಾವೆಲ್ಲಾ ಜಾಗೃತವಾಗಿ ಎದ್ದು ನಿಂತೆವು. ಇಂಥ ಸಮಯದಲ್ಲಿ ಮೈ ಮನಗಳು ವಿಪರೀತ ಉತ್ತೇಜನಕ್ಕೆ ಒಳಗಾಗುತ್ತವೆ. ಒಂದು ಸಣ್ಣ ಆತಂಕ, ಗಾಬರಿ, ಮನದಲ್ಲಿ ಉಂಟಾಗುತ್ತದೆ. ಈಗ ಯಾವುದೇ ಕ್ಷಣದಲ್ಲಿ ನಾವು ಕಾಯುವ ಹುಲಿಗಳು ಪೊದೆಯಿಂದ ಈಚೆಗೆ ಇಣುಕಬಹುದು. ಆದರೆ ಎಲ್ಲಿಂದ ಬರಬಹುದೆಂಬುದು ಯಾರಿಗೂ ಗೊತ್ತಿರುವುದಿಲ್ಲ. ಎಲ್ಲವೂ ಊಹೆಯಷ್ಟೆ. ಎಷ್ಟೋ ಸಲ ಎದುರಿಗೆ ಬರಬಹುದೆಂದು ಕಾಯುವ ಹುಲಿ ನಿಶ್ಶಬ್ದವಾಗಿ ಹಿಂಬದಿಯಿಂದ ಬಂದು ನಿಂತ ಸಂದರ್ಭಗಳೂ ನಡೆದಿವೆ. ಅನೇಕ ಸಲ ಹುಲಿ, ಚಿರತೆ, ಆನೆಗಳು ಕಾಯುವ ದಿಕ್ಕಿನ ಕಣ್ಣು ತಪ್ಪಿಸಿ ವಿರುದ್ಧ ದಿಕ್ಕಿನಿಂದ ಬಂದು ನಾವು ಗಾಬರಿ ಬಿದ್ದ ಪ್ರಸಂಗಗಳು ನಿಜಕ್ಕೂ ಮರೆಯಲಾಗದವು.

ಈ ಸಲವೂ ಹೀಗೇ ಆಯಿತು. ಹುಲಿಗಳು ವಿರುದ್ಧ ದಿಕ್ಕಿನಿಂದ ಬಂದವು. ನಮ್ಮ ಕಣ್ಣುಗಳು ಮುಂದಿನ ಪೊದೆಯ ಮೇಲೆ ನೆಟ್ಟಿದ್ದವು. ಅಷ್ಟರಲ್ಲಿ ನಮ್ಮ ಎದುರಿಗಿದ್ದ ಜೀಪಿನವರು ನಮ್ಮ ಕಡೆ ತಿರುಗಿ ಕ್ಯಾಮೆರಾಗಳ ಕ್ಲಿಕಿಸಿದರು. ನಾವು ದಿಗಿಲಾಗಿ ಹಿಂತಿರುಗಿ ನಿಂತೆವು. ಒಂದು ಹುಲಿ ನಮ್ಮ ಜೀಪಿನ ಹಿಂಬದಿಯಿಂದ ಹಾಯ್ದು ಬಂದು ಪಕ್ಕದ ಪೊದೆ ದಾಟಿ ಮುಂದೆ ಹೋಯಿತು. ಇದನ್ನು ಗಮನಿಸಿದ ಮತ್ತೊಂದು ಹುಲಿ ಚಂಗನೆ ಜಿಗಿದು ಬಂದು





ನೂರು ಕಣ್ಣು ಸಾಲದು



ಜಿಮ್ ಕಾರ್ಬೆಟ್ ಉದ್ಯಾನವನದ ವಿಹಂಗಮ ನೋಟ